Code No. **10 X(E)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜನವರಿ, 2019

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಸತ್ಯವು ಕೂಡ ಬೆಳಕಿನಂತೆಯೇ ಯಾವಾಗಲೂ ಲಭ್ಯವಿರುವ ಅಂತಹವುದು. ಇಲ್ಲಿ ಸತ್ಯ ಮುಖ್ಯವಾದುದಲ್ಲ, ಬದಲಿಗೆ ನಾನು ಕಣ್ಣುಗಳನ್ನು ಹೊಂದಿರುವುದು ಅಥವಾ ಆ ಕಣ್ಣುಗಳನ್ನು ತೆರೆದಿರುವುದು ಮುಖ್ಯ, ನೀರು ಯಾವಾಗಲೂ ಲಭ್ಯವಿರುತ್ತದೆ. ಆದರೆ ನೀರಿನ ಅವಶ್ಯಕತೆ ಉಂಟಾಗುವುದು ನನಗೆ ಬಾಯಾರಿಕೆ ಇದ್ದಾಗ ಮಾತ್ರ. ಆದ್ದರಿಂದಲೇ ನೀರಿನ ಕುರಿತು ನನ್ನ ಮಾತುಗಳನ್ನು ಆರಂಭಿಸುವ ಮೊದಲು ನಾನು ನಿಮ್ಮ ಬಾಯಾರಿಕೆಯ ಬಗ್ಗೆ ಚರ್ಚಿಸಲು ಬಯಸುತ್ತೇನೆ. ಮೂರನೆಯದಾಗಿ ಇನ್ನು ನಿಮಗೆ ಹೇಳಲು ಬಯಸುವುದು, ನನ್ನ ತಿಳುವಳಿಕೆಯಲ್ಲಿ ಧರ್ಮದ ಕುರಿತು ನಿಮ್ಮ ಹಂಬಲವೇ ಅತ್ಯಂತ ಅಮೂಲ್ಯವು ಆದುದು. ಅಂಥ ಧರ್ಮದ ತೃಷೆ ನಿಮ್ಮಲ್ಲಿ ಉಂಟಾಗಲೆಂದು ಬಯಸುತ್ತೇನೆ. ಏಕೆಂದರೆ ಯಾರಲ್ಲಿ ಧರ್ಮದ ಕುರಿತು ಬಾಯಾರಿಕೆ ಉಂಟಾಗುವುದೋ ಅವರು ದೀರ್ಘಕಾಲ ಧಾರ್ಮಿಕರಾಗದೇ ಹಾಗೇ ಉಳಿದಿರುವುದು ಸಾಧ್ಯವು ಆಗುವುದಿಲ್ಲ, ಯಾವುದೇ ವ್ಯಕ್ತಿ ವರ್ಷಗಳಿಂದಲೂ ನಾನು ಬಾಯಾರಿದರೂ ಬಾವಿಯನ್ನು ಹುಡುಕಿಕೊಂಡು ಹೋಗದಿರುವುದು ಅಸಾಧ್ಯ. ಆತ ಹೋಗದೇ ಇರಲು ಪ್ರಮುಖವಾದ ಕಾರಣ ಆತನಲ್ಲಿ ಬಾಯಾರಿಕೆಯೇ ಉಂಟು ಆಗದಿರುವುದು, ಬಾಯಾರಿಕೆ ಉಂಟಾದಾಗ ಉಸಿರು ಸಿಕ್ಕಿಹಾಕಿಕೊಳ್ಳುವುದು, ಪ್ರಾಣ ಅತ್ತಲೇ ಓಡಲು ಆರಂಭಿಸುವುದು, ಎಲ್ಲಿ ಬಾಯಾರಿಕೆ ಇರುವುದೋ ಅಲ್ಲಿ ಚಲನೆ ಆರಂಭವು ಆಗುವುದು, ಎಲ್ಲಿ ಬಾಯಾರಿಕೆ ಇರುವುದಿಲ್ಲವೋ ಅಲ್ಲಿ ಚಲನೆಯೂ, ಹುಡುಕಿಕೊಂಡು ಸಾಗುವಿಕೆಯೂ ಸಂಭವಿಸುವುದಿಲ್ಲ.

ಈ ಜಗತ್ತು ಅಧಾರ್ಮಿಕ ಆಗಿದೆಯೆಂದು

ಜನರು ಹೇಳುವರು. ಜಗತ್ತು ಆಧಾರ್ಮಿಕ ಆಗಿರುವ, ಬದಲಿಗೆ ಧರ್ಮದ ಕಡೆಗೆ ಸಾಗಬೇಕೆಂಬ ಆತುರಕೆ, ತೀವ್ರತೆ, ಹಂಬಲ ಕಡಿಮೆಯಾಗಿದೆ. ಅದರ ಕುರಿತು ಬಯಕೆ ನಾಶವಾಗಿದೆ. ಮಹಾವೀರನಂತಹ ವ್ಯಕ್ತಿ ಹಳ್ಳಿಯ ಮೂಲಕ ಹಾದು ಹೋದುತ್ತಿದ್ದರೆ, ಆತನ ಆನಂದ, ಆತನ ಶಾಂತ, ಅಂಥ ಆನಂದ ನಮಗೆ ಹೇಗೆ ಲಭ್ಯವು ಆಗಬಹುದು. ಒಂದು ಬಯಕೆಯು ಉಂಟಾಗುವುದು, ಮಹಾವೀರ, ಬುದ್ಧನಂತಹ ವ್ಯಕ್ತಿಗಳು ಯಾರಿಗೂ ಉಪದೇಶ ಮಾಡುವುದಿಲ್ಲ. ಅವರ ಉಪದೇಶ ಒಂದೇ, ಅದು ಅತ್ಯಂತ ತೀವ್ರವಾಗಿಯೂ ಇರುತ್ತದೆ. ಅವರು ನಿಮ್ಮ ಸನಿಹದಲ್ಲಿ ಹಾದುಹೋದರೆ ಸಾಕು ನಿಮ್ಮೊಳಗೆ ಒಂದು ತೀವ್ರತರವಾದ ಅಪೇಕ್ಷೆಯನ್ನು ಹುಟ್ಟು ಹಾಕುತ್ತಾರೆ. ಅವರು ನೀಡುವ ಬೋಧೆಗಳು ಅಷ್ಟು ಮುಖ್ಯವಲ್ಲ. ಏಕೆಂದರೆ ಅವರ ಬೋಧೆಗಳನ್ನು ಪುಸ್ತಕದಲ್ಲಿ ಬರೆಯಬಹುದು.

ಅದರಿಂದ ನಿಮಗೆ ಯಾವುದೇ ಉಪಯೋಗ ಆಗುವುದಿಲ್ಲ. ಈ ಜಗತ್ತಿನಲ್ಲಿ ಪ್ರತಿಯೊಬ್ಬ ಶಿಕ್ಷಕ ನಷ್ಟವು ಆದಾಗಲೂ ಆತನೊಂದಿಗೆ ಆತನ ಶಿಕ್ಷಣವೂ ನಷ್ಟವಾಗುವುದು. ಅವುಗಳಿಗೆ ಯಾವುದೇ ಅರ್ಥ ಇರುವುದಿಲ್ಲ, ಶಿಕ್ಷಕನ ವಿಶೇಷತೆ ಆತ ನೀಡುವ ಶಿಕ್ಷಣದಲ್ಲಿ ಇರುವುದಿಲ್ಲ, ವೈಶಿಷ್ಟ್ಯವು ನಿಮ್ಮೊಳಗೆ ಒಂದು ತೀವ್ರತರವಾದ ಬಯಕೆ ಅಥವಾ ಹಂಬಲವನ್ನು ಹುಟ್ಟುಹಾಕುವುದರ ಮೇಲೆ ಅವಲಂಬಿಸಿರುತ್ತದೆ, ಮೃತ ಶಿಕ್ಷಕ ನಿಮ್ಮಲ್ಲಿ ಅಂಥ ಬಯಕೆ ಅಥವಾ ಹಂಬಲವನ್ನು ಹುಟ್ಟು ಹಾಕುವುದು ಸಾಧ್ಯವಿಲ್ಲ.